ಬೆಂ.ಕೃಷಿ ವಿವಿ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

ತಿಪಟೂರು: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು 2023-24ನೇ ಸಾಲಿಗೆ ದೂರಶಿಕ್ಷಣದ ಮೂಲಕ ಕೃಷಿಗೆ ಸಂಬಂಧಿಸಿದ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಕನ್ನಡ ಮಾಧ್ಯಮದಲ್ಲಿ ಕಲಿಯಲು ಅರ್ಜಿ ಆಹ್ವಾನಿಸಲಾಗಿದೆ.

ಒಂದು ವರ್ಷದ ಕೃಷಿ ಡಿಪ್ಲೊಮಾ ಕೋರ್ಸ್, ಸರ್ಟಿಫಿಕೇಟ್ ಕೋರ್ಸ್‌ಗಳಾದಂತಹ ಸಮಗ್ರ ಕೃಷಿ, ಸಾವಯವ ಕೃಷಿ (ಅಂಚೆ ಶಿಕ್ಷಣ), ಕೃಷಿಯಲ್ಲಿ ಬೀಜೋತ್ಪಾದನೆ ತಾಂತ್ರಿಕತೆಗಳು, ಕೃಷಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ ಹಾಗೂ



ಜೇನು ಸಾಕಾಣಿಕೆ ಕೋರ್ಸ್‌ಗೆ ಅರ್ಜಿ ಆಹ್ವಾನಿಸಿದ್ದು, ಏ.28ರವರೆಗೆ ಅರ್ಜಿಗಳನ್ನು ಸಂಯೋಜಕರು, ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಜಿ.ಕೆ.ವಿ.ಕೆ, ಬೆಂಗಳೂರು ಅಥವಾ ಕೃಷಿ ವಿಜ್ಞಾನ ಕೇಂದ್ರ ಬಿದರೇಗುಡಿ ಕಾವಲು ತಿಪಟೂರು ತಾಲೂಕು ಇಲ್ಲಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಏ.29ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕೃಷಿ ವಿಸ್ತರಣ ವಿಜ್ಞಾನಿ ದರ್ಶನ್ ಮೊ. 7259200919 ಅಥವಾ ಕ್ಷೇತ್ರ ವ್ಯವಸ್ಥಾಪಕರು ಡಾ। ಸತೀಶ್ ಮೊ. 9740782464 ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳಾದ ಡಾ. ವಿ. ಗೋವಿಂದೇ ಗೌಡರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

17-04-2023
Kannadaprbha Pg 03

For more information visit
University Library Website
Web - uasbagrilibindia.org
E-mail- librarian@uasbangalore.edu.in

17-04-2023
Hosadiganta Pg 01

ಸ್ಥಳೀಯ ಉತ್ಪನ್ನಕ್ಕೆ ರಫ್ತಾಗುವ ಗುಡ್-ಗೌರ್‌ವ

ವಿದೇಶಕ್ಕೂ ಉಕದ ಜೋನಿ ಬೆಲ್ಲ

ಬೆಂಗಳೂರು: ಜೋನಿ ಬೆಲ್ಲ ಉತ್ತರ ಕನ್ನಡ ಜಿಲ್ಲೆಯಲ್ಲಿ ಚಿರಪರಿಚಿತ. ಹೊರಗಿನ ಪ್ರಪಂಚದ ಕೆಲವರಿಗಷ್ಟೇ ಈ ಬೆಲ್ಲದ ಬಗ್ಗೆ ಗೊತ್ತು. ಈಗ ಈ ಬೆಲ್ಲವನ್ನು ದೇಶ- ವಿದೇಶಕ್ಕೆಲ್ಲ ಪರಿಚಯಿಸಲು ಅಂಕೋಲಾದ ಶರಣ್ಯಾ ಗಾಂವ್ಕರ್ ಅವರು ಗುಡ್ ಗೌರ್ ಮೂಲಕ ಸಿದ್ಧರಾಗಿದ್ದಾರೆ.

ಥಿಂಕ್ ಲೋಕಲ್ ಆ್ಯಕ್ಟ್ ಗ್ಲೋಬಲ್ ಎಂಬ ಮಾತಿದೆ. ಈ ಮಾತಿಗೆ ತಕ್ಕನಾಗಿಯೇ ಶರಣ್ಯಾ ಅವರು ಉತ್ತರ ಕನ್ನಡ ಜಿಲ್ಲೆಯ ಸ್ಥಳೀಯ ಉತ್ಪನ್ನವಾದ ಜೋನಿ ಬೆಲ್ಲವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯಲು ನಾಲ್ಕು ವರ್ಷದ ಹಿಂದೆ ಸಣ್ಣ ಪ್ರಮಾಣದ ಸ್ಟಾರ್ಟಪ್ ಎಸ್‌ಜಿ ನೇಟೀವ್ ಎಂಬ ಕಂಪನಿ ಆರಂಭಿಸಿದ್ದರು. ಈ ಸ್ಟಾರ್ಟಪ್ ವೈಶಿಷ್ಟ್ಯವೆಂದರೆ ಇವರು ಕೇವಲ ಬೆಲ್ಲ ಮತ್ತು ಬೆಲ್ಲದ ಉತ್ಪನ್ನಗಳನ್ನು ಮಾತ್ರ ತಯಾರಿಸುತ್ತಿದ್ದಾರೆ. ಕಂಪನಿ ಆರಂಭಿಸಿದಾಗ ಸಾಧಾರಣ ಜೋನಿ ಬೆಲ್ಲವನ್ನು ಎಲ್ಲರಂತೆ ತಯಾರಿಸಿದ್ದರು. ಆದರೆ ಅದು ಕೆಲ ಸಮಯದ ನಂತರ ಗಟ್ಟಿಯಾಗುತ್ತಿತ್ತು. ಅದನ್ನು ತಪ್ಪಿಸಲು ಉಪ್ಪಿನಾಂಶ ಕಡಿಮೆ ಇರುವ ಕಬ್ಬನ್ನು ಆಯ್ದು, ನೈಸರ್ಗಿಕ ಪದ್ಧತಿಯಲ್ಲೇ ಬೆಲ್ಲ ತಯಾರಿಸಲು ಆರಂಭಿಸಿದರು. ಪ್ರತಿ ಬಾರಿ ತಯಾರಿಸಿದ ಬೆಲ್ಲವನ್ನೂ ಲ್ಯಾಬ್‌ನಲ್ಲಿ ಪರೀಕ್ಷಿಸಿ, ಅದರಲ್ಲಿ ಯಾವುದೇ ಹಾನಿಕಾರಕ ಅಂಶಗಳಿಲ್ಲ ಎಂಬುದನ್ನು ಖಾತ್ರಿ ಪಡಿಸಿಕೊಂಡ ನಂತರವೇ ಪ್ಯಾಕ್ ಮಾಡಿ ಮಾರಾಟ ಮಾಡಲಾಗುತ್ತದೆ. ➡9



> ನೈಸರ್ಗಿಕ ಮತ್ತು ಆರೋಗ್ಯಕರ ಉತ್ಪನ್ನಗಳೂ ಜನರಿಗೆ ತಲುಪಬೇಕು ಎಂಬ ಕಾರಣಕ್ಕೆ ಜೋನಿ ಬೆಲ್ಲದ ಉತ್ಪನ್ನ ಮಾರಾಟ ಆರಂಭಿಸಿದೆ. ನಮ್ಮ ಪಾರಂಪರಿಕ ಉತ್ಪನ್ನಗಳನ್ನು ದೇಶ ಮತ್ತು ವಿದೇಶಕ್ಕೆ ತಲುಪಿಸುವ ಉದ್ದೇಶದಿಂದಲೇ ಸ್ಟಾರ್ಟಪ್ ಆರಂಭಿಸಿರುವೆ. ಉತ್ಪನ್ನಗಳನ್ನು ಕೊಂಡ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ.
> ■ ಶರಣ್ಯಾ ಗಾಂವ್ಕರ್,
> ಎಸ್‌ಜಿ ನೇಟೀವ್ ಸ್ಥಾಪಕಿ

ವಿದೇಶಕ್ಕೂ ಉಕದ ಜೋನಿ ಬೆಲ್ಲ

ಈಗ ಕಂಪನಿ ರೈತರೊಂದಿಗೆ ಒಪ್ಪಂದ ಮಾಡಿಕೊಂಡು, ನೈಸರ್ಗಿಕ ಪದ್ಧತಿಯಲ್ಲಿ ಯಾವುದೇ ರಾಸಾಯನಿಕ ಬಳಸದೆ ಕಬ್ಬು ಬೆಳೆಯಲು ಕೂಡ ಯಶಸ್ವಿಯಾಗಿದೆ. ತನಗೆ ಬೇಕಾದಷ್ಟು ಕಬ್ಬನ್ನು ನೈಸರ್ಗಿಕ ರೀತಿಯಲ್ಲೇ ರೈತರಿಂದ ಬೆಳೆಸಲಾಗುತ್ತಿದೆ. ಕಬ್ಬು ಕಟಾವು ಮಾಡಿದ 24 ಗಂಟೆಯೊಳಗೆ ಅದನ್ನು ಅರೆದು ಬೆಲ್ಲ ತಯಾರಿಸಬೇಕು. ಆಗ ಮಾತ್ರ ಅದರಲ್ಲಿನ ಸಂಪೂರ್ಣ ಪೌಷ್ಟಿಕಾಂಶ ಪಡೆಯಲು ಸಾಧ್ಯ. ಹೀಗಾಗಿ ಒಮ್ಮೆಗೆ ಎಷ್ಟು ಬೆಲ್ಲ ಮಾಡಲು ಸಾಧ್ಯವಿದೆಯೊ ಅಷ್ಟು ಕಬ್ಬನ್ನು ಮಾತ್ರ ಅಂಕೋಲಾಕ್ಕೆ ತಂದು ಬೆಲ್ಲ ತಯಾರಿಸಲಾಗುತ್ತದೆ. ಬೆಲ್ಲದ ಜತೆಗೆ, ಬೆಲ್ಲದಲ್ಲೇ ಬೇಯಿಸಿದ ತೆಂಗಿನ ಕಾಯಿ, ಬೆಲ್ಲದಲ್ಲಿ ಬೇಯಿಸಿದ ಬಾಳೇದಿಂಡು (ಬಾಳೆ ಗಿಡದ ತಿರುಳು) ಇವನ್ನು ಕೂಡ ತಯಾರಿಸಿ ಮಾರಾಟ ಮಾಡಲಾಗುತ್ತಿದೆ. ಇವೆಲ್ಲ ಬೆಲ್ಲ ತಯಾರಿಸುವ ಸೀಸನ್‌ನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಜನಜನಿತವಾದ ತಿನಿಸುಗಳು. ಅವುಗಳು ಕೂಡ ಈಗ ದೇಶ- ವಿದೇಶದ ಜನರ ನಾಲಿಗೆ ಯಲ್ಲಿ ನಲಿದಾಡಲಿವೆ. ಈ ಯಾವುದೇ ಉತ್ಪನ್ನಕ್ಕೂ ಹೆಚ್ಚುವರಿಯಾಗಿ ಏನನ್ನೂ ಸೇರಿಸುವುದಿಲ್ಲ. ನೈಸರ್ಗಿಕವಾಗಿಯೇ ಬೆಲ್ಲ ಮತ್ತು ಅದರ ಉತ್ಪನ್ನಗಳು ದೀರ್ಘಬಾಳಿಕೆ ಬರುವುದರಿಂದ, ಅತ್ಯಂತ ನೈಸರ್ಗಿಕವಾಗಿಯೇ ಅದನ್ನು ಜನರಿಗೆ ತಲುಪಿಸಲಾಗುತ್ತಿದೆ.

ಅನಾದಿ ಕಾಲದಿಂದಲೂ ದಣಿದು ಬಂದವರಿಗೆ ಬೆಲ್ಲ- ನೀರು ಕೊಡುವ ಪದ್ಧತಿ ಹಳ್ಳಿಗಳಲ್ಲಿ ಜಾರಿಯಲ್ಲಿದೆ. ಅದಕ್ಕೆ ಕಾರಣ ಬೆಲ್ಲದಲ್ಲಿರುವ ಪೌಷ್ಟಿಕ ಅಂಶಗಳು. ಮಧುಮೇಹಿಗಳು ಕೂಡ ಸಕ್ಕರೆ ಬದಲಿಗೆ ಬೆಲ್ಲ ಬಳಸಿ, ಸಿಹಿಯ ಖುಷಿ ಅನುಭವಿಸಬಹುದು. ರಕ್ತದಲ್ಲಿ ಹಿಮೋಗ್ಲೋಬಿನ್ ಅಂಶ ಹೆಚ್ಚಲು, ದೇಹ ವನ್ನು ತಂಪಾಗಿಡಲು ಈ ಬೆಲ್ಲ ಸಹಕಾರಿ. ಆಸಕ್ತರು gudgur.comಗೆ ಸಂಪರ್ಕಿಸಬಹುದು.

JNTBGRI honoured with GGI-Gardens award for this year

The Hindu Bureau
THIRUVANANTHAPURAM

The Jawaharlal Nehru Tropical Botanic Garden and Research Institute (JNTBGRI) here has won the 2023 Global Genome Initiative for Gardens Award. This is the second time that the institute has been honoured with the award. This year, the institute is one of the 10 botanical gardens and arboreta across the globe to win it.

The institute had picked several plants including the medicinal plants *Coscinium fenestratum* (tree turmeric) and *Piper barberi* (in Malayalam, 'Kaatu Mulaku') for genome diversity conservation under the GGI-Gardens programme.



Coscinium fenestratum was selected by JNTBGRI for genome diversity conservation

The JNTBGRI holds the largest living collection of plant species in India with over 50,000 accessions of about 4,800 species. The institute had discovered more than 800 new species of angiosperms, mushrooms and fungi, it said in a statement.